ಕಮಲಾಕರ ಕಡವೆ

## ನೊಬೆಲ್ ಪುರಸ್ಕೃತ ಕವಯಿತ್ರಿ ಲೂಯಿಸ್ ಗ್ಲುಕ್

# ಗಾಯಗಳನ್ನು ನೇವರಿಸುವ ಪದಗಳ ಕಾವ್ಯ

2020ರ ಸಾಹಿತ್ಯದ ನೊಬೆಲ್ ಪುರಸ್ಕಾರ ಅಮೆರಿಕದ ಕವಯಿತ್ರಿ ಲೂಯೀಸ್ ಗ್ಲುಕ್ ಅವರಿಗೆ ಸಂದಿದೆ. ಅವರ ಸಾಹಿತ್ಯದ ಅನನ್ಯತೆಯನ್ನು ಕಾಣಿಸುವ ಬರಹ ಇಲ್ಲಿದೆ.

ವಿಶ್ವ ಸಾಹಿತ್ಯದ ಸರ್ವೋಚ್ಚ ಸಮ್ಮಾನವಾದ ನೊಬೆಲ್ ಪುರಸ್ಕಾರ ಪಡೆಯಲು ಉನ್ನತ ರಾಜಕೀಯ ಕಲ್ಪನೆಗಳ, ಉದಾತ್ತ ಸಾಮಾಜಿಕ ಆಶಯಗಳ, ಉಜ್ವಲ ಆಧ್ಯಾತ್ಮಿಕ ಕಾಣ್ಕೆಗಳ, ಅಥವಾ ಉತ್ಕಟ ಭಾವ ತೀವ್ರತೆಯ ಸಾಹಿತ್ಯವಾಗಿರಬೇಕು ಎಂದೇ ಎಲ್ಲರ ನಿರೀಕ್ಷೆ, ಅಪೇಕ್ಷೆ. ಇದೇ ಅಕ್ಟೋಬರ್ ಎಂಟರಂದು 2020ರ ಸಾಹಿತ್ಯದ ನೊಬೆಲ್ ಪುರಸ್ಕಾರದ ಘೋಷಣೆಯಾಗುತ್ತಿದ್ದಂತೆ ಹೊರಹೊಮ್ಮಿದ ‘ಆಹ್ – ಓಹ್’ ಉದ್ಗಾರಗಳಲ್ಲಿ ಅರ್ಧ ಅಮೆರಿಕದ ಕವಯಿತ್ರಿ ಲೂಯಿಸ್ ಗ್ಲುಕ್ ಅವರಿಗೆ ಸಿಕ್ಕಿದ್ದಕ್ಕೆ ಖುಷಿಯಿತ್ತು, ಇನ್ನರ್ಧಕ್ಕೆ ತಾವು ನಿರೀಕ್ಷಿಸಿದ್ದ ಇನ್ನಾರಿಗೋ ಸಿಗದಿದ್ದುದಕ್ಕೆ ಬೇಸರವಿತ್ತು.

ಕಠೋರ ಸೌಂದರ್ಯದ ಸುಸ್ಪಷ್ಟ ಧ್ವನಿಯಲ್ಲಿ